

ವಾಸುದೇವ ಶರ್ಮಾ ಎನ್.ವಿ.

# ಬಹುರೂಪಕಗಳ ಬಣ್ಣದ ಪುಸ್ತಕಗಳು

ಬಣ್ಣದ ಚಿತ್ರಗಳನ್ನು ನೋಡಿ ಆನಂದಿಸುತ್ತಾ, ಅವುಗಳ ಚಿಕ್ಕ ವಿವರಗಳನ್ನು ಗುರುತಿಸುತ್ತಾ ಖುಷಿಪಡುವ ಮಕ್ಕಳಿಗೆ ಹಾಗೂ ಅಕ್ಷರಗಳ ಗುರುತಿಸುವ, ಪುಟ್ಟ ಪದಗಳ ವಾಕ್ಯಗಳನ್ನು ಓದಿ, ಅರ್ಥ ಗ್ರಹಿಸುವ ವಯಸ್ಸಿನ ಮಕ್ಕಳಿಗಾಗಿ 'ಬಹುರೂಪಿ' ಪ್ರಕಾಶನ ಹೊಸ ಪೀಳಿಗೆಯ 14 ಪುಸ್ತಕಗಳನ್ನು ಪ್ರಕಟಿಸಿದೆ. ವೈವಿಧ್ಯಮಯವಾದ ವಿಷಯ-ವಿಚಾರಕ್ಕೆ ಸಂಬಂಧಿಸಿ ವಿವರಗಳನ್ನು ಪಡೆಯಲು ಕುತೂಹಲ ಮೂಡಿಸುವ, ಪ್ರಶ್ನೆಗಳನ್ನು ಹುಟ್ಟಿಸುವ ಮತ್ತು ತಮ್ಮೊಳಗೇ ಆಲೋಚಿಸುವಂತೆ ಮಾಡುವ ಕಥಾಹಂದರಗಳು ಈ ಪುಸ್ತಕಗಳಲ್ಲಿವೆ. ಮಕ್ಕಳಿಗಾಗಿ ಬರೆಯುವುದು ಸವಾಲಿನ ಕೆಲಸ. ಮಗುವಿನ ಅನುಭವ ಪ್ರಪಂಚವನ್ನು ತಟ್ಟುತ್ತಾ ನನ್ನೊಳಗೂ ಇಂತಹುದೇ ಆಲೋಚನೆಯಿದೆ, ಪ್ರಶ್ನೆಯಿದೆ ಎಂಬ ಅರಿವು ಮಗುವಿನ ಮನಸ್ಸಿನಲ್ಲಿ ಮೂಡಿಸುವಂತೆ ಬರೆಯುವುದು ಸುಲಭವಲ್ಲ.

ಮಕ್ಕಳಲ್ಲಿ ಪರಿಸರ ಜಾಗೃತಿ, ಪರಿಸರ ವಿಜ್ಞಾನದ ಪರಿಚಯ, ಕುಟುಂಬ ಮತ್ತು ಹತ್ತಿರದವರೊಂದಿಗೆ ಮಕ್ಕಳ ಸಂಬಂಧಗಳು, ಸವಾಲುಗಳ ನಡುವೆಯೂ ವಿಶೇಷ ಸಾಮರ್ಥ್ಯದಿಂದ ಬಾಳುವ ಮಕ್ಕಳ ಪರಿಚಯ, ನೋವು, ವಿದಾಯ, ದುಃಖವನ್ನು ಮಕ್ಕಳೂ ಅನುಭವಿಸುವುದನ್ನು ಅರಿತುಕೊಳ್ಳುವ ಪರಿ, ಮಕ್ಕಳಲ್ಲಿ ಏಳುವ ಪ್ರಶ್ನೆಗಳು, ಅವರಲ್ಲಿ ಮೊಳಕೆಯೊಡೆಯುವ ಕುತೂಹಲ, ಎದುರಾಗುವ ಸಮಸ್ಯೆ, ಅವುಗಳಿಗೆ ಪರಿಹಾರ ಕಂಡುಕೊಳ್ಳುವ ವಿಚಾರಗಳು ಈ ಪುಸ್ತಕಮಾಲೆಯಲ್ಲಿ ಮುಖ್ಯವಾಗಿ ಕಂಡುಬರುತ್ತವೆ. ಪ್ರೌಢಶಾಲೆಯ ಮಕ್ಕಳಿಗೆ ಓದಲು ಸುಲಭವಾದ ಕೊಂಚ ತಮಾಷೆ, ಸಾಹಸ, ಹುಡುಕಾಟಗಳನ್ನು ಒಳಗೊಂಡು ಕೌಟುಂಬಿಕ ಸಂಬಂಧಗಳನ್ನು ಕಾಣಬಹುದಾದ ಸರಳ ಕಾದಂಬರಿಯೂ ಇದೆ. ಮಕ್ಕಳಿಗೆ ಸಾಮಾಜಿಕ ವಿಚಾರಗಳನ್ನು ತಿಳಿಸುವ, ಹಕ್ಕು, ಸಮಾನತೆಗಳ ಸಾಂವಿಧಾನಿಕ ಅಂಶಗಳನ್ನೂ ವಿವರಿಸುವ ಕಥೆಗಳು ಸುಂದರ ಚಿತ್ರಗಳೊಡನೆ ಸರಳವಾಗಿ ತಿಳಿಸುವುದು ಈ 14 ಪುಸ್ತಕಗಳ ವಿಶೇಷತೆ.

13 ಪುಸ್ತಕಗಳು ಈಗಾಗಲೇ ವಿವಿಧ ಪ್ರಕಾಶಕರಿಂದ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿವೆ. ಕೆಲವು ಪುಸ್ತಕಗಳು ವಿಶೇಷ ಮನ್ನಣೆ, ಬಹುಮಾನಗಳನ್ನೂ ಪಡೆದಿವೆ. ಪರಿಸರ, ವಿಜ್ಞಾನ, ಮಾನವಸಂಬಂಧಗಳು, ವಿಶೇಷ ಮಕ್ಕಳು ಮತ್ತು ಪ್ರಶ್ನೆ, ವಿಸ್ಮಯ, ಹುಡುಕಾಟದ ವಸ್ತು ವಿಷಯಗಳ ಜೊತೆಗೆ 'ಅಂಬೇಡ್ಕರ್ ವಿಚಾರಧಾರೆ'ಯನ್ನು